ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	152
ಸದಸ್ಯರ ಹೆಸರು	:	ಶ್ರೀ ಕೆ.ಎ.ತಿಪ್ಪೇಸ್ವಾಮಿ, (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ	:	16-02-2022.
ಉತ್ತರಿಸುವ ಸಚಿವರು	:	ಮಾನ್ಯ ಲೋಕೋಪಯೋಗಿ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ "ಭಾರತ ಮಾಲಾ" ಕಾರ್ಯಕ್ರಮದ ಅಡಿ ಬೆಂಗಳೂರು ನಗರ ಸುತ್ತಲು ವರ್ತುಲ ರಸ್ತೆ ಅಂದರೆ, ಸೆಟ್‌ಲೈಟ್ ಟೌನ್ ರಿಂಗ್ ರಸ್ತೆ ನಿರ್ಮಿಸುವ ಯೋಜನೆಯನ್ನು ಕೈಗೊಂಡಿದೆಯೇ; ಹಾಗಿದ್ದಲ್ಲಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ರಾಜ್ಯ ಸರ್ಕಾರದ ನಡುವೆ ಯಾವ ಅನುಪಾತದಲ್ಲಿ ವೆಚ್ಚವನ್ನು ಭರಿಸಲು ಒಪ್ಪಿ ಈ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಲಾಗಿದೆ; (ಈ ಯೋಜನೆಯ ವ್ಯಾಪ್ತಿಗೆ ಸೇರುವ ಪಟ್ಟಣಗಳು ಒಳಗೊಂಡಂತೆ ಈ ಯೋಜನೆಯ ಪೂರ್ಣ ಮಾಹಿತಿ ನೀಡುವುದು);	ಬೆಂಗಳೂರು ರಿಂಗ್ ರೋಡ್ (STRR) (ಪಶ್ಚಿಮ ಭಾಗ)) – ರಾಹೆ-948ಎ ಭಾಗವಾಗಿ ಕರ್ನಾಟಕ ಮತ್ತು ತಮಿಳುನಾಡು ರಾಜ್ಯದಲ್ಲಿ ಕಿ.ಮೀ.0.00 ರಿಂದ 179.969 ರವರೆಗೆ 6 ಪ್ಯಾಕೇಜ್‌ಗಳ ಅಡಿಯಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರು ವರದಿಸಿದ್ದು, ವಿವರಗಳು ಕೆಳಕಂಡಂತಿವೆ. ಎ) ಬೆಂಗಳೂರು ರಿಂಗ್ ರಸ್ತೆ (STRR)-NH-948A- Package-1 ರ ಹಂತ-1 ಡಾಬಸ್‌ಪೇಟೆಯಿಂದ ಮಾಗಡಿವರೆಗೆ ಕಿ.ಮೀ 0.00 ರಿಂದ 46.300- DPR ಪ್ರಗತಿಯಲ್ಲಿದೆ. LA ಸ್ಥಿತಿ: 3A 100% ಪೂರ್ಣಗೊಂಡಿದೆ. 3D ಪ್ರಗತಿಯಲ್ಲಿದೆ. ಬಿ) ಬೆಂಗಳೂರು ರಿಂಗ್ ರಸ್ತೆ (STRR)-NH-948A ರ ಹಂತ-1 ಪ್ಯಾಕೇಜ್-2 ಮಾಗಡಿಯಿಂದ ರಾಮನಗರವರೆಗೆ ಕಿ.ಮೀ 46.300 ರಿಂದ 79.00-DPR ಪ್ರಗತಿಯಲ್ಲಿದೆ. LA ಸ್ಥಿತಿ: 3A 100% ಪೂರ್ಣಗೊಂಡಿದೆ, 3D ಪ್ರಗತಿಯಲ್ಲಿದೆ. ಸಿ) ಬೆಂಗಳೂರು ರಿಂಗ್ ರಸ್ತೆ (STRR)-NH-948A ರ ಹಂತ-2 ರ ಪ್ಯಾಕೇಜ್-1 ರಾಮನಗರದಿಂದ Bannerghatta National Park ಕಿ.ಮೀ 79.00 ರಿಂದ 112.600 ವರೆಗೆ – DPR ಪ್ರಗತಿಯಲ್ಲಿದೆ LA ಸ್ಥಿತಿ: 3A 100% ಪೂರ್ಣಗೊಂಡಿದೆ, 3D ಪ್ರಗತಿಯಲ್ಲಿದೆ. ಡಿ) ಬೆಂಗಳೂರು ರಿಂಗ್ ರಸ್ತೆ (STRR)-NH-948A- ಹಂತ-2 ರ ಪ್ಯಾಕೇಜ್-2 BNP ಯ ಸಂಪೂರ್ಣ ಕೋರ್ ಪ್ರದೇಶದಲ್ಲಿ BNP ಎತ್ತರಿಸಿದ ಹೆದ್ದಾರಿಯ ಮತ್ತು ESZ (Echo Sensitive Zone) ಪಕ್ಕದ ಪ್ರದೇಶದಲ್ಲಿ @ 1 ಕಿ.ಮೀ ಎರಡೂ ಬದಿಗಳಲ್ಲಿ ಅಪ್ರೋಚ್ ರಸ್ತೆಗಳು ಒಳಗೊಂಡಂತೆ ಕಿ.ಮೀ.112.600 ರಿಂದ 120.700-DPR ಪ್ರಗತಿಯಲ್ಲಿದೆ. LA ಸ್ಥಿತಿ: 3A 100% ಪೂರ್ಣಗೊಂಡಿದೆ, 3D ಪ್ರಗತಿಯಲ್ಲಿದೆ ಮತ್ತು ಇ) ಬೆಂಗಳೂರು ರಿಂಗ್ ರಸ್ತೆ (STRR)-NH-948A ರ ಹಂತ-2ರ ಪ್ಯಾಕೇಜ್-3 BNP ನಿಂದ ಬೆಳಗೊಂದಪಲ್ಲಿ (TN) ಗೆ ಕಿ.ಮೀ 120.700 ರಿಂದ 144.480 ವರೆಗೆ – DPR ಪ್ರಗತಿಯಲ್ಲಿದೆ. LA ಸ್ಥಿತಿ:3A 100% ಪೂರ್ಣಗೊಂಡಿದೆ. ಕರ್ನಾಟಕ ವಿಭಾಗದಲ್ಲಿ 3D ಪ್ರಗತಿಯಲ್ಲಿದೆ. ಮತ್ತು ತಮಿಳುನಾಡು ವಿಭಾಗದಲ್ಲಿ 3D ಪೂರ್ಣಗೊಂಡಿದೆ. ಎಫ್) ಬೆಂಗಳೂರು ರಿಂಗ್ ರಸ್ತೆ (STRR)-NH-948A ರ ಹಂತ-3ರ ಪ್ಯಾಕೇಜ್-1 ಬೆಳಗೊಂದಪಲ್ಲಿ (TN) ನಿಂದ TN/KNT ಗಡಿ ಕಿ.ಮೀ 144.480 ರಿಂದ 179.969-3A ಮತ್ತು 3D 100% ವರೆಗೆ ಪೂರ್ಣಗೊಂಡಿದೆ. ಮಾರ್ಚ್-2022 ರೊಳಗೆ ಅವಾರ್ಡ್ ಸಾಧ್ಯತೆ ಇರುತ್ತದೆ. ದಿನಾಂಕ: 08.09.2021 ರಂದು ಗೌರವಾನ್ವಿತ ಕೇಂದ್ರ ಸಚಿವರು (RT&H) ಮತ್ತು ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳ

		ನಡುವೆ ನಡೆದ ಸಭೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಟೋಲ್ ಆದಾಯದ ಹಂಚಿಕೆಯ ಮೂಲಕ NHAI ನಿಂದ ಯಾವುದೇ ಮರುಪಾವತಿ ಪಡೆಯದೇ 30% ಭೂಸ್ವಾಧೀನ ವೆಚ್ಚವನ್ನು ಭರಿಸಲು ಹಾಗೂ ರಾಜ್ಯ ಸರ್ಕಾರವು ಖನಿಜಗಳ (ಮರಳು, ಜೆಲ್ಲಿ ಇತ್ಯಾದಿ) ಮೇಲಿನ ರಾಯಲ್ಟಿ ವಿನಾಯಿತಿಗೆ ಮತ್ತು ಯೋಜನೆಯ ನಿರ್ಮಾಣಕ್ಕೆ ಬಳಸಲಾಗುವ ಸಿಮೆಂಟ್, ಉಕ್ಕು ಮುಂತಾದ ವಸ್ತುಗಳ ಮೇಲಿನ ರಾಜ್ಯ ಭಾಗದ GST ವಿನಾಯಿತಿಗೆ ಒಪ್ಪಿಗೊಳ್ಳುವ ಬಗ್ಗೆ ಚರ್ಚಿತವಾಗಿದ್ದು, ಈ ಬಗ್ಗೆ ಪರಿಶೀಲನೆಯಲ್ಲಿದೆ. ಯೋಜನೆಯ ಜೋಡಣೆಯು ಬೆಂಗಳೂರು (ಗ್ರಾಮೀಣ) ಜಿಲ್ಲೆಯ ನೆಲಮಂಗಲ ತಾಲ್ಲೂಕು, ರಾಮನಗರ ಜಿಲ್ಲೆಯ ಮಾಗಡಿ, ರಾಮನಗರ, ಕನಕಪುರ ತಾಲ್ಲೂಕುಗಳು, ಬೆಂಗಳೂರು (ನಗರ) ಜಿಲ್ಲೆಯ ಆನೇಕಲ್ ತಾಲ್ಲೂಕು ಮತ್ತು ಕೃಷ್ಣಗಿರಿ ಜಿಲ್ಲೆಯ ಹೊಸೂರು ಮತ್ತು ಡೆಂಕನಿಕೋಟೆ ತಾಲ್ಲೂಕುಗಳ ಮೂಲಕ ಹಾದುಹೋಗುತ್ತದೆ. ಯೋಜನೆಯ ಜೋಡಣೆಯ ಉದ್ದಕ್ಕೂ ಹತ್ತಿರದ ಡಾಬಸ್‌ಪೇಟೆ, ಮಾಗಡಿ, ರಾಮನಗರ ಕನಕಪುರ, ಆನೇಕಲ್ ಮತ್ತು ಹೊಸೂರು ಪಟ್ಟಣಗಳನ್ನು ಸಂಧಿಸುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.
ಆ)	ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಿರ್ಮಿಸುತ್ತಿರುವ ಈ ವರ್ತುಲ ರಸ್ತೆ ಚೆನ್ನೈ-ಬೆಂಗಳೂರು ಕೈಗಾರಿಕಾ ಕಾರಿಡಾರ್‌ನ ಅಂಗಭಾಗವಾಗಿದೆಯೇ; ಹಾಗೂ ತುಮಕೂರು ಜಿಲ್ಲೆಯಲ್ಲಿ ಸ್ಥಾಪಿಸಿರುವ ವಸಂತ ನರಸಾಪುರ ಕೈಗಾರಿಕೆ ಕೇಂದ್ರಕ್ಕೆ ಸಂಪರ್ಕ ಕಲ್ಪಿಸುವುದೇ ಮತ್ತು ವಸಂತನರಸಾಪುರ ಕೈಗಾರಿಕೆ ವಲಯದ ಮೂಲಕ ಬರುವ ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಗೆ ಯಾವ ಹಂತ ಮತ್ತು ಜಾಗದಲ್ಲಿ ಜೋಡಣೆಯಾಗಲಿದೆ; (ಪೂರ್ಣ ಮಾಹಿತಿ ನೀಡುವುದು)	ಹೌದು, ಬೆಂಗಳೂರು ರಿಂಗ್ ರೋಡ್ (ಸ್ಯಾಟ್‌ಲೈಟ್ ಟೌನ್ ರಿಂಗ್ ರೋಡ್) ಚೆನ್ನೈ - ಬೆಂಗಳೂರು ಕೈಗಾರಿಕಾ ಕಾರಿಡಾರ್‌ನ ಒಂದು ಭಾಗವಾಗಿದೆ. ಇದು ತುಮಕೂರು ಜಿಲ್ಲೆಯ ನರಸಾಪುರದ ಕೈಗಾರಿಕಾ ಪ್ರದೇಶವನ್ನು ಸಂಪರ್ಕಿಸುವುದಿಲ್ಲ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.
ಇ)	ತುಮಕೂರು ನಗರದ ಕೇಂದ್ರ ಭಾಗ ಹಾಗೂ ಸುಪ್ರಸಿದ್ಧ ಧಾರ್ಮಿಕ ಕೇಂದ್ರವಿರುವ ಕ್ಯಾತಸಂದ್ರದ ಮಧ್ಯಭಾಗದಲ್ಲಿ ಪೂನಾ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಹಾದು ಹೋಗುತ್ತಿದ್ದು, ತುಮಕೂರು ನಗರಕ್ಕೆ ಪರ್ಯಾಯವಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ನಿರ್ಮಿಸಲು ಉದ್ದೇಶಿಸಲಾಗಿರುವ ವರ್ತುಲ ರಸ್ತೆಯನ್ನು ಈ ಕಾರಿಡಾರ್ ಭಾಗವನ್ನಾಗಿಸುವುದು ಉತ್ತಮವಲ್ಲವೇ? (ಈ ಬಗ್ಗೆ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ ಪೂರ್ಣ ಮಾಹಿತಿ ನೀಡುವುದು)	ತುಮಕೂರು ಬೈಪಾಸ್ ಯೋಜನೆಯನ್ನು NHAI ವತಿಯಿಂದ ಕೈಗೆತ್ತಿಕೊಳ್ಳಲಾಗುತ್ತಿದೆ. ತುಮಕೂರು ರಾಷ್ಟ್ರೀಯ ಹೆದ್ದಾರಿ-48ರ ಕಿ.ಮೀ.54.980ರಲ್ಲಿ ನಂದಿಹಳ್ಳಿಯಿಂದ ಟೇಕ್ ಆಫ್ ಪಾಯಿಂಟ್ ಆಗಿದ್ದು ಮಲ್ಲಸಂದ್ರ ರಾಷ್ಟ್ರೀಯ ಹೆದ್ದಾರಿ-206ರ ಕಿ.ಮೀ.12.300 ರಲ್ಲಿ ಸಂಪರ್ಕಿಸುತ್ತದೆ ಮತ್ತು ರಾಷ್ಟ್ರೀಯ ಹೆದ್ದಾರಿ-48ರ ಕಿ.ಮೀ.88.100 ವಸಂತನರಸಾಪುರದಲ್ಲಿ ಕೊನೆಗೊಳ್ಳುತ್ತದೆ. ವಿವರವಾದ ಯೋಜನಾ ವರದಿ ಮತ್ತು ಭೂಸ್ವಾಧೀನ ಪ್ರಗತಿಯಲ್ಲಿದೆ ಮತ್ತು 80% ಭೂಸ್ವಾಧೀನ ಲಭ್ಯವಾದ ನಂತರ ಜೂನ್/ಜುಲೈ 2023ರಲ್ಲಿ ಬಿಡ್‌ಗಳನ್ನು ಆಹ್ವಾನಿಸುವ ನಿರೀಕ್ಷೆ ಇದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.

ಕಡತ ಸಂಖ್ಯೆ: ಲೋಇ 39 ಸಿಎನ್‌ಹೆಚ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು